
## ನಾಂದಿಪದ

# ಕಥೆಗಳ ದಸರೆ



ಹೊಸ ತಲೆಮಾರಿನ ಕಥೆಗಾರರಿಗಿದು ಸುಗ್ಗಿಕಾಲ. ಕಥಾಸ್ಪರ್ಧೆ ಹಾಗೂ ಕಥಾಸಂಕಲನಗಳ ಪ್ರಶಸ್ತಿ ಪುರಸ್ಕಾರಗಳು ವರ್ಷದ ಎಲ್ಲ ಕಾಲದಲ್ಲೂ ಸುದ್ದಿ ಮಾಡುತ್ತಿರುವುದು ಕಥೆಗಾರರಿಗೆ ಹುಮ್ಮಸ್ಸು ಹೆಚ್ಚಿಸುವಂತಿವೆ. ಈ ಹುಮ್ಮಸ್ಸು ಗುಣಮಟ್ಟದ ರೂಪದಲ್ಲೂ ಕಾಣಿಸುತ್ತಿದೆಯೇ ಎನ್ನುವ ಪ್ರಶ್ನೆಗೆ ಸುಲಭ ಉತ್ತರವಿಲ್ಲ. ಕಥೆ-ಕಾವ್ಯ ಅಥವಾ ಕಾದಂಬರಿ ಪ್ರಕಾರದಲ್ಲಿ ಕಾಣಬಹುದಾದ ಹುಮ್ಮಸ್ಸನ್ನು ವಿಮರ್ಶೆಯಲ್ಲಿ ಕಾಣಲಾರೆವು. ಹಾಗಾಗಿ, ತಾಳಿಕೆ ಬಾಳಿಕೆಯ ಸಂಗತಿಯನ್ನು ಕಾಲಕ್ಕೆ ಬಿಡುವುದು ಅನಿವಾರ್ಯ.

ಹೊಸ ತಳಿರಿನ ಕಲರವದ ನಡುವೆ ಬೇರುಗಳ ರೂಪದ ಹಿರಿಯ ಕಥೆಗಾರರು ಏನು ಬರೆಯುತ್ತಿದ್ದಾರೆ ಎನ್ನುವ ಕುತೂಹಲಕ್ಕೆ ಉತ್ತರದಂತಿದೆ ಈ ಸಂಚಿಕೆ. ಅನುಭವಿ ಕಥೆಗಾರರ ಕಥನಗಳೇ ಮುನ್ನೆಲೆಯಲ್ಲಿರುವ ಅಕ್ಟೋಬರ್ ಸಂಚಿಕೆ ಕಥೆಗಳ ಜಂಬೂಸವಾರಿ. ಈ ಕಥೆಗಳನ್ನು, ಜೀವನದರ್ಶನ ಹಾಗೂ ಕಸುಬುದಾರಿಕೆಯ ಪಠ್ಯದ ರೂಪದಲ್ಲಿ ಕಥನ ಕುತೂಹಲಿಗಳು ಗಮನಿಸಬಹುದು.

ಗಜಲ್ ಪ್ರಕಾರಕ್ಕೆ ಶಿಸ್ತು ಹಾಗೂ ಘನತೆ ತಂದುಕೊಟ್ಟ ಕವಿ ಶಾಂತರಸರ ಬದುಕು-ವ್ಯಕ್ತಿತ್ವವನ್ನು ಕಾಣಿಸುವ ಬರಹ ಈ ಸಂಚಿಕೆಯ ಮುಖ್ಯಭಾಗಗಳಲ್ಲೊಂದು. ಜನ್ಮಶತಾಬ್ದಿ ಸಂದರ್ಭದಲ್ಲಿ ಶಾಂತರಸರ ಬದುಕು-ವ್ಯಕ್ತಿತ್ವವನ್ನು 'ಮಯೂರ' ಪ್ರೀತಿ ಗೌರವದಿಂದ ನೆನಪಿಸಿಕೊಳ್ಳುತ್ತಿದೆ.

ಅಕ್ಟೋಬರ್ ಸಂಚಿಕೆಯಲ್ಲಿ ಗಾಂಧೀಜಿ ಇಲ್ಲದಿದ್ದರೆ ಹೇಗೆ? ಮಹಾತ್ಮನ ಕುರಿತ ಕಥೆ-ಕವಿತೆಗಳೊಂದಿಗೆ, ಮೀರಾ ಬೆನ್ ಅವರಿಗೆ ಬಾಪು ಬರೆದ ಕೆಲವು ಪತ್ರಗಳು ಈ ಸಂಚಿಕೆಯಲ್ಲಿವೆ. ಈ ಬರಹಗಳು, ಗಾಂಧಿಯೊಂದಿಗೆ ಹಾಗೂ ಗಾಂಧಿತತ್ತ್ವಗಳೊಂದಿಗೆ ಕನ್ನಡ ಸಾಹಿತ್ಯ ನಿರಂತರವಾಗಿ ನಡೆಸುತ್ತಿರುವ ಅನುಸಂಧಾನದ ಭಾಗವಾಗಿವೆ.

**ಮಯೂರ ಬಳಗ**

**editormy@mayura.co.in**